# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 157 (1549) |
| ಮಾನ್ಯ ಸದಸ್ಯರ ಹೆಸರು | : | ಡಾ. ಉಮಾಶ್ರೀ<br>(ನಾಮನಿರ್ದೇಶನ ಹೊಂದಿದವರು) |
| ಉತ್ತರಿಸುವ ದಿನಾಂಕ | : | 17.03.2026 |
| ಉತ್ತರಿಸುವ ಸಚಿವರು | : | ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂಮೂಲಸೌಲಭ್ಯ ಅಭಿವೃದ್ಧಿ ಸಚಿವರು |

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ರಾಜ್ಯದಲ್ಲಿ ಕೈಗಾರಿಕಾ ಪ್ರದೇಶಗಳ ಮೂಲಭೂತ ಸೌಕರ್ಯ ಅಭಿವೃದ್ಧಿಗೆ ವಿಶೇಷ ಅನುದಾನವನ್ನು ಈ ಸಾಲಿನ ಆಯವ್ಯಯದಲ್ಲಿ ನೀಡುವುದರ ಬಗ್ಗೆ ಸರ್ಕಾರ ಚಿಂತಿಸಿದೆಯೇ; ಹಾಗಿದ್ದಲ್ಲಿ ಎಷ್ಟು ಅನುದಾನವನ್ನು ನೀಡುತ್ತಿದೆ.</td><td>ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಗೆ ಸಂಬಂಧಿಸಿದಂತೆ ಈ ಸಾಲಿನ ಆಯವ್ಯಯದಲ್ಲಿ ಮೂಲಸೌಕರ್ಯ ಅಭಿವೃದ್ಧಿಗೆ ಯಾವುದೇ ವಿಶೇಷ ಅನುದಾನವನ್ನು ಒದಗಿಸಿರುವುದಿಲ್ಲ.</td></tr>
<tr><td>ಆ</td><td>ರಾಜ್ಯದ ಜಿಲ್ಲೆಗಳಲ್ಲಿ ಕೈಗಾರಿಕಾ ಟೌನ್‌ಶಿಪ್‌ಗಳ ಸ್ಥಾಪನೆ ಮಾಡುವ ಬಗ್ಗೆ ಸರ್ಕಾರ ಗಮನ ಹರಿಸಿದೆಯೇ; ಹಾಗಿದ್ದಲ್ಲಿ ಈ ಕೈಗಾರಿಕಾ ಟೌನ್‌ಶಿಪ್‌ಗಳ ಸ್ಥಾಪನೆಗೆ ಎಷ್ಟು ಅನುದಾನ ನೀಡಲಾಗುವುದು. ಇದನ್ನು ಯಾವಾಗ ಪ್ರಾರಂಭಿಸಲಾಗುವುದು. (ಇದರ ಕಾರ್ಯಚಟುವಟಿಕೆಗಳ ವಿವರ ನೀಡುವುದು)</td><td>ರಾಜ್ಯದಲ್ಲಿ ಕೇಂದ್ರ ಸರ್ಕಾರದ ಸಹಭಾಗಿತ್ವದಲ್ಲಿ ಚೆನ್ನೈ-ಬೆಂಗಳೂರು ಇಂಡಸ್ಟ್ರಿಯಲ್ ಕಾರಿಡಾರ್ ಯೋಜನೆಯಡಿ ತುಮಕೂರಿನಲ್ಲಿ ಹಾಗೂ ಬೆಂಗಳೂರು-ಮುಂಬೈ ಇಂಡಸ್ಟ್ರಿಯಲ್ ಕಾರಿಡಾರ್ ಯೋಜನೆಯಡಿ ಧಾರವಾಡದಲ್ಲಿ ಇಂಡಸ್ಟ್ರಿಯಲ್ ಟೌನ್‌ಶಿಪ್/ ನೋಡ್‌ಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ.<br><br>1) ತುಮಕೂರು ಇಂಡಸ್ಟ್ರಿಯಲ್ ಟೌನ್‌ಶಿಪ್/ನೋಡ್:<br><br>ಸುಮಾರು 8313.00 ಎಕರೆ ಪ್ರದೇಶದಲ್ಲಿ 3 ಹಂತಗಳಲ್ಲಿ ಇಂಡಸ್ಟ್ರಿಯಲ್ ಟೌನ್‌ಶಿಪ್‌ನ್ನು ಅನುಷ್ಠಾನಗೊಳಿಸಲು ಉದ್ದೇಶಿಸಿದ್ದು, ವಿವರಗಳು ಕೆಳಕಂಡಂತಿದೆ:
<table>
<tr><th>ಹಂತ</th><th>ವಿಸ್ತೀರ್ಣ (ಎಕರೆಗಳಲ್ಲಿ)</th></tr>
<tr><td>Phase-A (1ನೇ ಹಂತ)</td><td>1736.20</td></tr>
<tr><td>Phase-B (2ನೇ ಹಂತ)</td><td>1929.25</td></tr>
<tr><td>Phase-C (3ನೇ ಹಂತ)</td><td>4647.59</td></tr>
<tr><td>ಒಟ್ಟು</td><td>8313.00</td></tr>
</table>
ಮೊದಲನೇ ಹಂತದಲ್ಲಿ (Phase-A) 1736.20 ಎಕರೆ ಪ್ರದೇಶದಲ್ಲಿ ಕೈಗಾರಿಕಾ ಟೌನ್‌ಶಿಪ್ ನಿರ್ಮಾಣ ಮಾಡಲು ದಿನಾಂಕ : 01.02.2023 ರಂದು ಮೆ|| ಎಲ್&ಟಿ ಲಿಮಿಟೆಡ್ ರವರ ಜೊತೆ ಗುತ್ತಿಗೆ ಕರಾರು ನಿರ್ವಹಿಸಿದ್ದು, ಸದರಿ ಯೋಜನೆಯು ಪ್ರಗತಿಯಲ್ಲಿದ್ದು, ಯೋಜನೆಯನ್ನು ಸೆಪ್ಟಂಬರ್-2027 ರೊಳಗಾಗಿ ಪೂರ್ಣಗೊಳಿಸಲಾಗುತ್ತದೆ.<br><br>ಸದರಿ ಪಾರ್ಕ್‌ನಲ್ಲಿ ಕೇಂದ್ರ ಸರ್ಕಾರದ ಪರವಾಗಿ ನ್ಯಾಷನಲ್ ಇಂಡಸ್ಟ್ರಿಯಲ್ ಕಾರಿಡಾರ್ ಡೆವಲಪ್‌ಮೆಂಟ್ ಇಂಪ್ಲಿಮೆಂಟೇಷನ್ ಟ್ರಸ್ಟ್ ಮತ್ತು ರಾಜ್ಯ ಸರ್ಕಾರದ ಪರವಾಗಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಜಂಟಿ</td></tr>
</table>

| | | |
|---|---|---|
| | | ಪಾಲುದಾರಿಕೆಯನ್ನು ಹೊಂದಿದ್ದು, ತಲಾ 50% ಷೇರುಗಳನ್ನು ಹೊಂದಿರುತ್ತವೆ.<br>ಮೊದಲನೇ ಹಂತ (Phase-A) ಯೋಜನೆಯ ಅನುಷ್ಠಾನಕ್ಕಾಗಿ ಕೇಂದ್ರ ಸರ್ಕಾರವು ದಿನಾಂಕ 30.12.2020 ರಲ್ಲಿ ಒಟ್ಟು ರೂ.1701.00 ಕೋಟಿಗಳಿಗೆ ಅನುಮೋದನೆ ನೀಡಿದ್ದು, ರೂ.584.00 ಕೋಟಿಗಳನ್ನು ಅನುದಾನ ರೂಪದಲ್ಲಿ ನೀಡಿರುತ್ತದೆ.<br>ಅದರಂತೆ, ಸದರಿ ಯೋಜನೆಗಾಗಿ ಅವಶ್ಯವಿರುವ 1736.20 ಎಕರೆ ಪ್ರದೇಶವನ್ನು ಭೂಸ್ವಾಧೀನ ಪಡಿಸಿಕೊಂಡಿದ್ದು, ಇದರ ಸಂಪೂರ್ಣ ವೆಚ್ಚವನ್ನು ಸರ್ಕಾರ/ ಕೆಐಎಡಿಬಿ ಭರಿಸಿರುತ್ತದೆ. ರಾಜ್ಯ ಸರ್ಕಾರವು ರೂ.400 ಕೋಟಿಗಳ ಅನುದಾನವನ್ನು ಭೂಸ್ವಾಧೀನಕ್ಕೆ ನೀಡಿರುತ್ತದೆ.<br>**2) ಧಾರವಾಡ ಇಂಡಸ್ಟ್ರಿಯಲ್ ಟೌನ್‌ಶಿಪ್/ನೋಡ್:**<br>ಕೇಂದ್ರ ಸರ್ಕಾರದ ಸಹಭಾಗಿತ್ವದಲ್ಲಿ ಬೆಂಗಳೂರು-ಮುಂಬೈ ಇಂಡಸ್ಟ್ರಿಯಲ್ ಕಾರಿಡಾರ್ ಯೋಜನೆಯಡಿ ಧಾರವಾಡದಲ್ಲಿ ಇಂಡಸ್ಟ್ರಿಯಲ್ ಟೌನ್‌ಶಿಪ್/ ನೋಡ್‌ನ್ನು ಅಂದಾಜು 3000 ಎಕರೆ ಪ್ರದೇಶದಲ್ಲಿ ಅಭಿವೃದ್ಧಿಪಡಿಸಲು ಉದ್ದೇಶಿಸಲಾಗಿದೆ.<br>ಮೊದಲನೇ ಹಂತದಲ್ಲಿ 1000 ಎಕರೆ ಪ್ರದೇಶದಲ್ಲಿ ಇಂಡಸ್ಟ್ರಿಯಲ್ ಟೌನ್‌ಶಿಪ್ ಅಭಿವೃದ್ಧಿಪಡಿಸಲು ರಾಜ್ಯ ಸರ್ಕಾರವು ರೂ.600 ಕೋಟಿ ಒದಗಿಸುತ್ತಿದ್ದು, 2026-27 ನೇ ಸಾಲಿನ ಆಯವ್ಯಯದಲ್ಲಿ ರೂ.200 ಕೋಟಿ ಒದಗಿಸಲಾಗಿದೆ.<br>ಇಂಡಸ್ಟ್ರಿಯಲ್ ಟೌನ್‌ಶಿಪ್‌ನ ಭೂಸ್ವಾಧೀನ ಪ್ರಕ್ರಿಯೆಯು ಪ್ರಗತಿಯಲ್ಲಿರುತ್ತದೆ.<br>**3) ಕೈಗಾರಿಕಾ ಪ್ರದೇಶಗಳು:**<br>ರಾಜ್ಯ ಸರ್ಕಾರವು ಬೇಡಿಕೆಯಿರುವ ಪ್ರದೇಶಗಳಲ್ಲಿ 2023ನೇ ಸಾಲಿನಿಂದ 2026ನೇ ಸಾಲಿನವರೆಗೆ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವ ಉದ್ದೇಶದಿಂದ **KIADB** ಯಿಂದ ಕೈಗಾರಿಕಾ ಪ್ರದೇಶಗಳಿಗಾಗಿ ಒಟ್ಟು **19401-01** ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲಾಗಿರುತ್ತದೆ. |
| ಇ | ಈ ಕೈಗಾರಿಕಾ ಟೌನ್‌ಶಿಫ್‌ಗಳ ಸ್ಥಾಪನೆಯಿಂದ ರಾಜ್ಯದ ನಿರುದ್ಯೋಗಿಗಳಿಗೆ ಉದ್ಯೋಗ ಅವಕಾಶ ಕಲ್ಪಸಲಾಗುವುದೆ; ಹಾಗಿದ್ದಲ್ಲಿ. ಎಷ್ಟು ಜನರಿಗೆ ಉದ್ಯೋಗ ಅವಕಾಶ ಸಿಗಲಿದೆ? | ತುಮಕೂರು ಇಂಡಸ್ಟ್ರಿಯಲ್ ಟೌನ್‌ಶಿಪ್/ನೋಡ್‌ನ Phase-A ರಲ್ಲಿ ಸುಮಾರು 83 ಸಾವಿರ ಜನರಿಗೆ ಮತ್ತು ಧಾರವಾಡ ಇಂಡಸ್ಟ್ರಿಯಲ್ ಟೌನ್‌ಶಿಪ್/ನೋಡ್‌ನಲ್ಲಿ ಸುಮಾರು 75 ಸಾವಿರ ಜನರಿಗೆ ನೇರ ಉದ್ಯೋಗದ ಅವಕಾಶ ಸಿಗುವುದಾಗಿ ಅಂದಾಜಿಸಲಾಗಿದೆ. |

**ಸಂಖ್ಯೆ: ಸಿಐ 181 ಐಎಪಿ 2026**

**(ಎಂ.ಬಿ. ಪಾಟೀಲ)**
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ ಸಚಿವರು